# ಮದುವೆಗೆ ಸಿದ್ಧ, ಆದರೆ ಈಗಲೇ ಅಲ್ಲ!

ಎಲ್ಲ ಸಾಮಾನ್ಯ ಯುವತಿಯರಂತೆಯೇ ಬದುಕಿನ ಯಾವ ಹಂತದಲ್ಲಿ ಬೇಕಾದರೂ ಮದುವೆಯಾಗಬಹುದು. ಆದರೆ ಆ ಬಂಧನಕ್ಕೆ ಒಳಗಾಗಲು ಆತುರವೇನಿಲ್ಲ

– ಹೀಗಂತ ಅಡ್ಡಗೋಡೆ ಮೇಲೆ ದೀಪವಿಟ್ಟಂತೆ ಹೇಳಿದ್ದಾಳೆ ಅನುಷ್ಕಾ ಶರ್ಮಾ. 'ಹಸೆಮಣೆ ಏರುವ ಗಳಿಗೆ ಇದು. ಆದರೆ ಅದು ಯಾವಾಗ ನಡೆಯುತ್ತದೆ ಎಂದು ನನಗೇ ತಿಳಿದಿಲ್ಲ. ಅದರ ಬಗ್ಗೆ ನಾನಿನ್ನೂ ಯೋಚಿಸಿಲ್ಲ. ನನ್ನ ಬದುಕಿನಲ್ಲಿ ಎಲ್ಲವನ್ನೂ ಸಹಜವಾಗಿಯೇ ಸ್ವೀಕರಿಸಿದ್ದೇನೆ. ನನ್ನ ಬದುಕಿನ ಮುಖ್ಯ ಗುರಿಗಳಲ್ಲಿ ಮದುವೆಯೂ ಒಂದು. ಆ ಗಳಿಗೆ ಯಾವಾಗ ಬರುವುದೋ ಗೊತ್ತಿಲ್ಲ' ಎಂದಿದ್ದಾಳೆ ಅನುಷ್ಕಾ. ಆಕೆಯ ಪ್ರಕಾರ ಮದುವೆಯಾದ ನಟಿಯರಿಗೆ ವಿಶಿಷ್ಟ ಪಾತ್ರಗಳು ಸಿಗುತ್ತಿವೆ. ಮಕ್ಕಳಾದ ಬಳಿಕವೂ ಅವರ ವರ್ಚಸ್ಸು ಕಳೆಗುಂದಿಲ್ಲ. ಅದೇ ವೇಗದಲ್ಲಿ ಪ್ರಯೋಗಶೀಲ ಸಿನಿಮಾಗಳನ್ನು ಮಾಡುತ್ತಿದ್ದಾರೆ. ಉದ್ಯಮದಲ್ಲಿನ ನಟಿಯರಿಗೆ ಇದು ಅದ್ಭುತ ಕಾಲ. ಮದುವೆಯಾದ ಬಳಿಕವೂ ಇದೇ ಸಹಜ ಬದುಕನ್ನು ಜೀವಿಸಲು ಇಷ್ಟಪಡುತ್ತೇನೆ. ಹಾಗೆಯೇ ಬದುಕಬೇಕು ಕೂಡ. ಜನರು ಈ ನಟಿ ತನ್ನ ಬದುಕನ್ನು ಹಾಳುಮಾಡಿಕೊಂಡಳು ಎಂದು ಹೇಳುವಂತೆ ಆಗಬಾರದು ಎಂದು ಮದುವೆಯ ಬಳಿಕವೂ ಸಿನಿಮಾ ನಂಟಿನಿಂದ ದೂರಸರಿಯುವುದಿಲ್ಲ ಎಂಬ ಸುಳಿವು ನೀಡಿದ್ದಾಳೆ.

ಕ್ರಿಕೆಟಿಗ ವಿರಾಟ್ ಕೊಹ್ಲಿ ಜತೆಗಿನ ಆಕೆಯ ಪ್ರೇಮ ಸಂಬಂಧದಲ್ಲಿ ಬಿರುಕು ಮೂಡಿದೆ ಎನ್ನುವಾಗಲೇ, ಅದಕ್ಕೆ ತೇಪೆ ಹಚ್ಚಿದ್ದಾಗಿದೆ. ಮೊನ್ನೆ ಮೊನ್ನೆ ಯುವರಾಜ್ ಸಿಂಗ್‌ನ ಮದುವೆಯಲ್ಲಿ ಇಬ್ಬರೂ ಜತೆಯಾಗಿ ಕುಣಿದು ಮೋಜು ಮಾಡಿದ್ದಾರೆ. ಆದರೆ, ಈ ಜೋಡಿ ಒಟ್ಟಿಗೆ ಹಸೆಮಣೆ ಏರುತ್ತದೆಯೇ ಎನ್ನುವುದು ಈಗ ಉಳಿದಿರುವ ಪ್ರಶ್ನೆ.





# ನೋವು, ಅವಮಾನ ಮತ್ತು ಕಿರೀಟ

ಬಾಲಿವುಡ್‌ನ 'ಕ್ವೀನ್' ಎಂದೇ ಹೆಸರಾಗಿರುವ ಕಂಗನಾ ರನೋಟ್, ಸಮಯ ಸಿಕ್ಕಾಗೆಲ್ಲಾ ತನ್ನ ಹಿಂದಿನ ಬದುಕಿನ ಕುರಿತು ಮಾತಿಗಿಳಿಯುತ್ತಾಳೆ. ಅದರಲ್ಲಿ ಹೆಚ್ಚಾಗಿ ಇಣುಕುವುದು ಸಂತಸಕ್ಕಿಂತ, ವ್ಯಂಗ್ಯ, ಲೇವಡಿ, ಅಪಮಾನ, ನೋವುಗಳನ್ನು ಎದುರಿಸಿದ ಕಥೆಗಳೇ. ಬಿಟೌನ್‌ನಲ್ಲಿ ತನ್ನದೊಂದು ಅಸ್ತಿತ್ವ ಕಂಡುಕೊಳ್ಳಲು ಹೆಣಗಾಡುತ್ತಿದ್ದ ನಟಿಯ ದೆಸೆಯನ್ನು ಬದಲಿಸಿದ್ದು 'ಕ್ವೀನ್' ಮತ್ತು 'ರಿವಾಲ್ವರ್ ರಾಣಿ' ಚಿತ್ರಗಳು. ಆದರೆ, ಅದಕ್ಕೂ ಮೊದಲಿನ ಸಿನಿಮಾಗಳಲ್ಲಿ ಕಂಗನಾ ಇದ್ದದ್ದು ಬರಿಯ ಗ್ಲಾಮರ್ ಗೊಂಬೆಯಾಗಿ. ಹಿಮಾಚಲ ಪ್ರದೇಶದ ಸಣ್ಣ ಪಟ್ಟಣದ ಆಕೆ ಬಾಲಿವುಡ್‌ಗೆ ಕಾಲಿಟ್ಟಾಗ ಅಲ್ಲಿನ ಜನರ ಬಾಯಿಗೆ ಆಹಾರವಾಗಿದ್ದಳು. ಆಕೆಯ ಉಡುಪಿನ ಶೈಲಿ, ಗುಂಗುರುಗಟ್ಟಿದ ಕೂದಲು, ಹಿಂದಿ ಉಚ್ಚಾರಣೆಯ ಬಗೆಯನ್ನು ಬಾಲಿವುಡ್ ಮಂದಿ ಅಣಕಿಸುತ್ತಿದ್ದರು. ಅವರು ಆಕೆಯನ್ನು ವ್ಯಂಗ್ಯವಾಡಲು ಹುಡುಕುತ್ತಿದ್ದದ್ದು ಆಕೆ ಮೂಲವನ್ನು. ಆಕೆಗೆ ಇಂಗ್ಲಿಷ್ ಮಾತನಾಡಲು ಬರುವುದಿಲ್ಲ, ಸರಿಯಾಗಿ ಉಡುಪು ಧರಿಸಲು ಬರುವುದಿಲ್ಲ, ಎಲ್ಲಿಂದಲೋ ಬಂದವಳು ಎಂದೆಲ್ಲಾ ಅವಮಾನ ಮಾಡುತ್ತಿದ್ದರು. ಆಕೆಗೆ ಮುಜುಗರ ಉಂಟು ಮಾಡುವುದೇ ಅವರ ಉದ್ದೇಶವಾಗಿತ್ತು. ಆದರೆ ಅದಾವುದಕ್ಕೂ ತಾನು ಕಿವಿಗೊಡಲಿಲ್ಲ. ಹೀಯಾಳಿಕೆಗಳು ತನ್ನನ್ನು ಕಂಗೆಡಿಸಲಿಲ್ಲ ಎಂದಿದ್ದಾಳೆ ಆಕೆ.

ಆರಂಭದಲ್ಲಿ ತಾನು ಬಾಲಿವುಡ್‌ನಲ್ಲಿ ದೊಡ್ಡ ಹೆಸರು ಮಾಡುತ್ತೇನೆ ಎಂದು ಹೇಳಿಕೊಂಡಾಗ ಜನ ನಗುತ್ತಿದ್ದರು. 'ಮುಂಚೂಣಿ ನಟಿಯರು ಯಾರು? ಸೋನಂ ಕಪೂರ್ ಅಥವಾ ದೀಪಿಕಾ ಪಡುಕೋಣೆ?' ಎಂಬ ಪ್ರಶ್ನೆಯೊಂದಿಗೆ ಆಯ್ಕೆ ನನ್ನ ಮುಂದೆ ಇಟ್ಟವರಿದ್ದಾರೆ. ಆಗ ನನ್ನ ಉತ್ತರ ಇರುತ್ತಿದ್ದದ್ದು 'ನಾನು'. ಆಗ ಅವರು ನಗುತ್ತಿದ್ದರು. ನಿಜ ನಾನು ಲೆಕ್ಕಕ್ಕೆ ಇರಲಿಲ್ಲ' ಎಂಬ ವ್ಯಂಗ್ಯ ಅಡಗಿತ್ತು ಎಂದಿದ್ದಾಳೆ.

'ನಾನು ಯಾವಾಗಲೂ ಕೆಲಸ ಆರಂಭಿಸುವುದು ನನ್ನ ವ್ಯಕ್ತಿಗತ ನೆಲೆಯಲ್ಲಿ. ಇಂದಿಗೂ ನಾನು ಚಿತ್ರೀಕರಣಕ್ಕೆ ಹೋದಾಗ ಜನರಿಂದ ಬರುವ ಮೊದಲ ಪ್ರತಿಕ್ರಿಯೆ 'ಓಹ್ ಆಕೆ ಅತಿ ಸೂಕ್ಷ್ಮದ ಹೆಣ್ಣು ಮಗಳು' ಎಂದು. ಆದರೆ ಸಿನಿಮಾ ಹೊರಬಂದಾಗ ಆ ಮಾತುಗಳೆಲ್ಲಾ ಮಾಯವಾಗಿರುತ್ತವೆ' ಎಂದು ಬದಲಾಗುವ ಮನೋಭಾವವನ್ನು ಆಕೆ ವಿವರಿಸಿದ್ದಾಳೆ. ನಿಜ. ಕಂಗನಾ ಬೆಳೆಯುತ್ತಾ ಹೋಗುತ್ತಿದ್ದಾಳೆ. ಆಕೆ ಮುಂದಿನ ಹೆಜ್ಜೆ ಇರಿಸುತ್ತಲೇ, ಹಳೆಯ ಹೆಜ್ಜೆಗಳನ್ನು ನೆನಪಿಸಿಕೊಳ್ಳುತ್ತಿದ್ದಾಳೆ.

■ ಅಮಿ